### ಕಾರ್ಕಳದಲ್ಲಿ ವಿ.ವಿ. ಮಟ್ಟದ ಮಹಿಳಾ ಕಬಡ್ಡಿ ಚಾಂಪಿಯನ್‌ಶಿಪ್‌ಗೆ ಚಾಲನೆ ನೀಡಿ ಶಾಸಕ ಸುನೀಲ್ ಹರ್ಷ

# ಖ್ಯಾತ ಕಬಡ್ಡಿ ಆಟಗಾರರರನ್ನು ನೀಡಿದ ಹೆಗ್ಗಳಿಕೆ ಕಾರ್ಕಳದ್ದು

**ಕಾರ್ಕಳ:** ಮಂಜುನಾಥ ಪೈ ಸ್ಮಾರಕ ಸರಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಮಂಗಳೂರು ವಿಶ್ವವಿದ್ಯಾನಿಲಯ ಜಂಟಿಯಾಗಿ ಆಯೋಜಿಸಿದ್ದ ಪ್ರಸಕ್ತಶೈಕ್ಷಣಿಕವರ್ಷದಅಂತರ್‌ಕಾಲೇಜುಮಹಿಳಾ ಕಬಡ್ಡಿ ಚಾಂಪಿಯನ್‌ಶಿಪ್ ಪಂದ್ಯಾವಳಿಯನ್ನು ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾಗಿರುವ ಶಾಸಕ ಸುನೀಲ್‌ಕುಮಾರ್ ಸೋಮವಾರ ಪೆರ್ವಾಜೆಯನಾರಾಯಣಗುರುಸಭಾಭವನದಲ್ಲಿ ಉದ್ಘಾಟಿಸಿದರು.



ಎರಡು ದಿನಗಳ ಪಂದ್ಯಾವಳಿ

ಅವರು ಮಾತನಾಡಿದ ಶಾಸಕ ಸುನೀಲ್ ಕುಮಾರ್, ಕಬಡ್ಡಿ ಆಟಗಾರರನ್ನು ರಾಜ್ಯಕ್ಕೆ, ರಾಷ್ಟ್ರಕ್ಕೆ ನೀಡಿದ ಕೀರ್ತಿ ಕಾರ್ಕಳಕ್ಕಿದೆ. ಏಷ್ಯನ್ ಗೇಮ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದ ಮಹಿಳಾ ಕಬಡ್ಡಿ ತಂಡದ ಕ್ಯಾಪ್ಟನ್ ಮಮತಾ ಪೂಜಾರಿ, ಕ್ರೀಡಾಳು ಸುಕೇಶ್ ಹೆಗ್ಡೆ ಕಾರ್ಕಳದವರು ಎನ್ನುವುದು ಹೆಮ್ಮೆಯ ವಿಚಾರ. ಹಿಂದೆಲ್ಲ ಗ್ರಾಮೀಣ ಭಾಗದಲ್ಲಿ ಕ್ರಿಕೆಟ್, ವಾಲಿಬಾಲ್ ಪಂದ್ಯಗಳಿಗಷ್ಟೇ ಪ್ರಾಮುಖ್ಯತೆಯಿತ್ತು. ಇತ್ತೀಚಿನ ವರ್ಷಗಳಲ್ಲಿ ಕಬಡ್ಡಿ ತನ್ನದೇ ಆದ ವ್ಯಾಪಕತೆ ಹಾಗೂ ಪ್ರಸಿದ್ಧಿ ಪಡೆಯುತ್ತಿದೆ. ಕಾರ್ಕಳ ತಾಲೂಕಿನಲ್ಲಿ ಮೊದಲ ಬಾರಿಗೆ ವಿ.ವಿ. ಮಟ್ಟದ ಕ್ರೀಡೆಯೊಂದು ನಡೆಯುತ್ತಿರುವುದು ನಮಗೆಲ್ಲಸಂತಸದ ವಿಷಯ. ನಾವೆಲ್ಲ ಕ್ರೀಡಾ ಸ್ಫೂರ್ತಿಯಿಂದ ಇದರಲ್ಲಿ ಭಾಗವಹಿಸಬೇಕು ಎಂದರು.

ಅಂತರ್ ರಾಷ್ಟ್ರೀಯ ಕ್ರೀಡಾಪಟು, ಚಲನಚಿತ್ರ ನಟ ರೋಹಿತ್ ಕುಮಾರ್ ಕಟೀಲು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿ, ನೀವು ವಿಶ್ವವಿದ್ಯಾನಿಲಯ ಮಟ್ಟಕ್ಕಷ್ಟೇ ಸೀಮಿತಗೊಳ್ಳ ಬೇಡಿ. ಕೇಂದ್ರ ಹಾಗೂ ರಾಜ್ಯ ಸರಕಾರ ನೀಡುವ ಸವಲತ್ತುಗಳನ್ನು ಬಳಸಿಕೊಂಡು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಮಿಂಚಿರಿ ಎಂದು ಹಾರೈಸಿದರು.

ಕಾರ್ಯಕ್ರಮದ ಅಧ್ಯತೆ ವಹಿಸಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲ ಶ್ರೀವರ್ಮ ಅಜ್ರಿ, ವಿ.ವಿ. ಮಟ್ಟದ ಪಂದ್ಯಾವಳಿಯನ್ನು ಆಯೋಜಿಸುವ ಅವಕಾಶ ನಮ್ಮ ಸರಕಾರಿ ಕಾಲೇಜಿಗೆ ಬಂದೊದಗಿರುವುದು ನಿಜಕ್ಕೂ ಹೆಮ್ಮೆಯ ವಿಷಯ ಎಂದರು.

ಕಟೀಲು ಇಂಟರ್‌ನ್ಯಾಶನಲ್ ಹೊಟೇಲ್‌ನ ಆಡಳಿತ ಪಾಲುದಾರ ಡಿ.ಆರ್. ರಾಜು ಮಾತನಾಡಿ, ವ್ಯಕ್ತಿಯ ಮಾನಸಿಕ ಹಾಗೂ ದೈಹಿಕ ಸುದೃಢತೆಗೆ ಕ್ರೀಡೆ ಅವಶ್ಯ. ಸೋಲು ಗೆಲುವುಗಳನ್ನು ಸಂತೋಷದಿಂದ ಸ್ವೀಕರಿಸಿ ಎಂದು ಹೇಳಿದರು.

ಮಂಗಳೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ಹರಿದಾಸ್ ಕೂಳೂರು, ಕಾಲೇಜಿನ ಕ್ರೀಡಾ ಕಾರ್ಯದರ್ಶಿ ವಿಘ್ನೇಶ್ ಉಪಸ್ಥಿತರಿದ್ದರು. ವಾಣಿಜ್ಯ ವಿಭಾಗದ ಮುಖ್ಯಸ್ಥೆ ಜ್ಯೋತಿ ಎಲ್. ಜನ್ನೆ ನಿರೂಪಿಸಿದರು. ಸ್ನಾತಕೋತ್ತರ ವಿಭಾಗದ ಸಂಚಾಲಕ ವಿದ್ಯಾಧರ ಹೆಗ್ಡೆ ವಂದಿಸಿದರು.

### ಹೆಮ್ಮೆಯ ವಿಷಯ

**ಹತ್ತು ಹದಿನೈದು ವರ್ಷದ ಹಿಂದೆ ಕಬಡ್ಡಿಗೆ ಯಾರೂ ಪ್ರೋತ್ಸಾಹ ನೀಡುವವರಿರಲಿಲ್ಲ, ಕ್ರೀಡಾಳುಗಳ ಹೆತ್ತವರೂ ಪ್ರೋತ್ಸಾಹ ಕೊಡುತ್ತಿ ರಲಿಲ್ಲ, ಇತ್ತೀಚೆಗೆ ಬಾಲಿವುಡ್‌ನ ಸಿನಿಮಾ ನಟರು ಕಬಡ್ಡಿಗೆ ಪ್ರಾಯೋಜಕತ್ವ ನೀಡಿದರ ಪರಿಣಾಮ ಕಬಡ್ಡಿ ವಿಶ್ವದಾದ್ಯಂತ ಜನಪ್ರಿಯತೆ ಪಡೆಯುತ್ತಿದೆ. ಇದು ನಿಜಕ್ಕೂ ಹೆಮ್ಮೆಯ ವಿಷಯ.**

■ ರೋಹಿತ್ ಕುಮಾರ್ ಕಟೀಲು, ಅಂತರ್ ರಾಷ್ಟ್ರೀಯ ಕ್ರೀಡಾಪಟು

■ ಸಭಾ ಕಾರ್ಯಕ್ರಮದ ನಂತರ ಕ್ರೀಡಾಳು ಗಳೊಂದಿಗೆ ಅಂಗಣದಲ್ಲಿ ಕಬಡ್ಡಿ ಆಡುವ ಮೂಲಕ ರೋಹಿತ್ ಕುಮಾರ್ ಕಟೀಲು ಪಂದ್ಯಾವಳಿಗೆ ಸಾಂಕೇತಿಕ ಚಾಲನೆ ನೀಡಿದರು.

■ ಎರಡು ದಿನಗಳ ಕಾಲ ನಡೆಯುವ ಈ ಪಂದ್ಯಾವಳಿಯಲ್ಲಿ ಸುಮಾರು 30 ತಂಡಗಳು ಭಾಗವಹಿಸಿದ್ದು, ಕಾರ್ಕಳದಲ್ಲಿ ಜರಗಿದ ಮೊದಲ ವಿ.ವಿ. ಮಟ್ಟದ ಮಹಿಳಾ ಕಬಡ್ಡಿ ಪಂದ್ಯಾವಳಿ ಇದಾಗಿದೆ.